## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 620/14

**ಸಾಕ್ಷಿಯನ್ನು ದಿಃ 13.06.2023 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಜನಾರ್ದನ್ ನಾಯಕ | ಸಿ.ಡಬ್ಲ್ಯೂ: **29** | ಪಿ.ಡಬ್ಲ್ಯೂ: **15** |
| ತಂದೆಯ ಹೆಸರು | ಅಚ್ಚುತ್ ನಾಯಕ | | |
| ವಯಸ್ಸು | 60 ವರ್ಷ | | |
| ಕೆಲಸ | ನೌಕರರು, ಕರ್ನಾಟಕ ಬ್ಯಾಂಕ್ | | |
| ವಾಸಸ್ಥಳ | ಬ್ರಹ್ಮಾವರ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು ಹುಣಸೂರಿನ ಕರ್ನಾಟಕ ಬ್ಯಾಂಕ್ನಲ್ಲಿ ಗುಮಾಸ್ತನಾಗಿ 2010 ರಿಂದ 2014 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 23.12.2010 ರಂದು ಆರೋಪಿ ನಮ್ಮ ಬಾಂಕನಲ್ಲಿ ರಾಜಮ್ಮ ಎನ್ನುವವರಿಗೆ ಸೇರಿದ ಒಂದು ಚೆಕ್ ನ್ನು ಬಿಪಿಸಿ ಮಾಡುವಂತೆ ನನ್ನ ಕೈಗೆ ತಂದು ಕೊಟ್ಟಿದ್ದರು. ಅದರ ಜೊತೆ ಮ್ಯಾನೇಜರ ಸಹಿ ಮಾಡಿರುವ ಸ್ಲೀಪ್ ಸಹ ಕೊಟ್ಟಿದ್ದರು. ಅದು ರೂ.57,783/-ಯ ಚೆಕ್ ಆಗಿದ್ದು ಚೆಕ್ ನಂಬರ ನನಗೆ ನೆನಪಿಲ್ಲ. ಅದನ್ನು ನಾನು ಸಿಸ್ಟಂಗೆ ಎಂಟ್ರಿ ಮಾಡಿ ಚಾಸಾ-14 ರವರಿಗೆ ನೀಡಿರುತ್ತೇನೆ. ಸದರಿ ಚೆಕ್ ಪಾಸಾದ ನಂತರ ಹಣ ರಾಜಮ್ಮ ಅವರ ಅಕೌಂಟಿಗೆ ಹೋಗಿರುತ್ತದೆ. ನಂತರ ಏನಾಯಿತು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ರೂ 25 ಲಕ್ಷ ಗಳ ಆರ್‌ಟಿಜಿಎಸ್ ಉಪ್ಪಾರನವರ ಅಕೌಂಟನಿಂದ ತೆಗೆದು ಆರೋಪಿ ತನ್ನ ಹೆಂಡತಿಯ ಅಕೌಂಟಗೆ ಹಾಕಿಕೊಂಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಬೇರೆ ಏನೂ ಮಾಹಿತಿ ಇಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

2. ಪ್ರಧಾನ ಕಚೇರಿಯ ಚೀಫ್ ಮ್ಯಾನೇಜರ್ ಶ್ರೀ ಪ್ರಫುಲ್ಲಾ ಚಂದ್ರ ಮತ್ತು ಶ್ರೀನಿವಾಸ ಬಚೆಟ್ ಮಂಗಳೂರುರವರು ನಮ್ಮ ಶಾಖೆಯಲ್ಲಿ ದಿನಾಂಕ 06.03.2012 ರಿಂದ 10.03.2012 ರವರೆಗೆ ತನಿಖೆ ಮಾಡಿದಾಗ ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕು ಹಂಪಾಪುರ ಹೋಬಳಿ ಕ್ಯಾತನಹಳ್ಳಿ ಗ್ರಾಮದ ರಾಜಮ್ಮ ಕೊಂ ಜಗನ್ನಾಧ, ಅವರ ಹುಣಸೂರು ಶಾಖೆಯಲ್ಲಿ ದಿನಾಂಕ 21.05.2010 ರಂದು ಖಾತೆ ತೆರೆದಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಖಾತೆ ಸಂಖ್ಯೆ 764262 ಎಂದರೆ ಗೊತ್ತಿಲ್ಲ. ಸದರಿ ರಾಜಮ್ಮರವರು ಎರಡು ವಿವಿಧ ಸಾಲ ಸೌಲಭ್ಯಗಳನ್ನು ತೆಗೆದುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಶ್ರೀಮತಿ ರಾಜಮ್ಮ ಕೊಂ ಜಗನ್ನಾಥರವರು ಕಬ್ಬು ಬೆಳೆಗಾರರಾಗಿದ್ದು ತಾವು ಬೆಳೆದ ಕಬ್ಬನ್ನು ಬನ್ನಾರಿ ಎಮ್ಮನ ಶುಗರ ಕಾರ್ಖಾನೆಗೆ ಸರಬರಾಜು ಮಾಡುತ್ತಿದ್ದುನಮ್ಮ ಬ್ಯಾಂಕಿನ ಮ್ಯಾನೇರ ಆದ ಆರೋಪಿಯು ದಿನಾಂಕ 07.07.2010 ರಂದು ಸಾದರಿ ಕಾರ್ಖಾನೆಯ ಆಡಳಿತ ಮಂಡಳಿಗೆ ಪತ್ರ ಬರೆದು ಕಾರ್ಖಾನೆಗೆ ಸರಬರಾಜು ಮಾಡಿದ ಹಣವನ್ನು ತಮ್ಮ ಬ್ಯಾಂಕಿಗೆ ನೇರವಾಗಿ ಕಳುಹಿಸುವಂತೆ ಮನವಿ ಮಾಡಿರುತಾತರೆ ಎಂದರೆ ಗೊತ್ತಿಲ್ಲ. ದಿನಾಂಕ 07.12.2010 ರಂದು ಚೆಕ್ ಸಂಖ್ಯೆ 083539 ರೂ.57,783/–ನ್ನು ತಮ್ಮ ಉಳಿತಾಯ ಖಾತೆಗೆ ಸಂದಾಯವಾಗುವಂತೆ ಸೂಚಿಸಿ ಚೆಕ್ಕನ್ನು ಆರೋಪಿಯವರಿಗೆ ರಾಜಮ್ಮ ಹಸ್ತಾಂತರ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ ಹಾಗೂ ರಾಜಮ್ಮರವರು ಖ್ಖಾತೆಯಿಂದ ಹಣ ತೆಗೆಯುವುದಕ್ಕೆ ಹಾಗೂ ಜಮಾ ಮಾಡುವುದಕ್ಕೆ ಬೇಕಾದ ಚಲನಗಳಿಗೆ ಅರೋಪಿಯ ಸಹಿ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ನಂತರ ಆರೋಪಿಯ ಹಣ ತೆಗೆಯುವ ಚೆಲನನ್ನು ಭರ್ತಿ ಮಾಡಿ ಚಾಸಾ–28 ರವರ ಚೆಕನ್ನು ದೃಢೀಕರಿಸಲು ನೀಡಿದ್ದು ನಂತರ ರಮ್ಯಾರವರು ಕ್ಯಾಶಿಯರ ರವರಿಂದ ದಿನಾಂಕ 23.12.2010 ರಂದು ರೂ.55,000/–ಗಳನ್ನು ಹಾಗೂ ದಿನಾಂಕ 18.01.2011 ರಂದು ರೂ2,250/–ಗಳನ್ನು ನಗದೀಕರಿಸಿಕೊಂಡು ಹಣವನ್ನು ದುರಪಯೋಗಪಡಿಸಿ ಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ಇದೇ ರೀತಿ ನಮ್ಮ ಬ್ಯಾಂಕಿನ ಹುಣಸೂರಿನ ಗ್ರಾಹಕರಾದ ಹೆಚ್.ಎಸ್.ವರದರಾಜು ರವರು ಎಸ್.ಬಿ.ಖಾತೆ ಸಂಖ್ಯೆ 760364 ನ್ನು ಹೊಂದಿದ್ದು ಅವರು ಬ್ಯಾಂಕನಿಂದ ವಿವಿಧ ಉದ್ದೇಶಗಳಿಗಾಗಿ ರೂ.11,25,000/–ಗಳನ್ನು ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ದಿನಾಂಕ 03.02.2011 ರಂದು ಆರೋಪಿರವರಿಗೆ ಸಾಲದ ಖಾತೆಗೆ ಜಮಾ ಮಾಡುವಂತೆ ರೂ.3,00,000/–ಗಳನ್ನು ನೀಡಿದ್ದು ನಂತರ ದಿನಾಂಕ 31.05.2011 ರಂದು ರೂ.2,64,000/–ಗಳನ್ನು ಸಾಲದ ವಿವಿಧ ಖಾತೆಗೆ ವರ್ಗಾಯಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಈ ರೀತಿ ಆರೋಪಿಯು ದಿನಾಂಕ

10.02.2011 ರಂದು ಬೇರೆ ಕಚೇರಿಗೆ ವರ್ಗಾವಣೆಯಾಗಿದ್ದು ಆಗ ರೂ.36,000/- ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ ಹುಣಸೂರಿನ ಬೈಪಾಸ್ ರಸ್ತೆಯಲ್ಲಿರುವ ಕೆಫೆ ಕೂರ್ಗ ಎನ್.ಕೆ.ಕಾವೇರಪ್ಪರವರ ಆರೋಪಿಯು ಕೆವೈಸಿ ನಿಯಮಗಳನ್ನು ಪಾಲಿಸದೇ ಅವರಿಗೆ ಖಾತೆಯನ್ನು ತೆರೆಯಲು ಸಹಕರಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ ಆರೋಪಿ ದಿನಾಂಕ 23.02.2010 ರಂದು ಕೆಬಿಎಲ್ ಕಾರ್ ಲೋನ್ ಸ್ಕಿಂನಲ್ಲಿ ಸುಜುಕಿ ಸ್ವಿಷ್ಟ ಕಾರ್ ರೂ.8,02,410/-ರ ಖರೀದಿಸಲು ರೂ.6,00,000/-ಗಳ ಕಂತು ಸಾಲವನ್ನು ನೀಡಿದ್ದು ಸಾಲದ ಹಣವನ್ನು ಜಮಾ ಮಾಡಿರುತ್ತಾರೆ. ಹಾಗೂ ಅದೇ ದಿನ ಪ್ರಥಮ್ ಮೋಟಾರ್ ಬೆಂಗಳೂರು ಇವರಿಗೆ ಸಂದಾಯವಾಗುವಂತೆ ರೂ.6,12,073 ನ್ನು ಡಿ.ಡಿ ಸಂಖ್ಯೆ 448521 ನ್ನು ನಮ್ಮ ಬ್ಯಾಂಕಿನ ಸರ್ವೀಸ್ ಶಾಖೆಯಲ್ಲಿ ಪಡೆಯುವಂತೆ ನೀಡಿದ್ದು ಅದಕ್ಕೆ ಸಂಬಂಧಪಟ್ಟ ಇನವೈಸ್ ರಶೀದಿ, ಡುಪ್ಲಿಕೇಟ್ ಕೀ ಹಾಗೂ ಕಾರಿನ ಆರ್ಸಿ ಪುಸ್ತಕದ ನಕಲನ್ನು ಸಹ ಬ್ಯಾಕಿಗೆ ಕೊಟ್ಟಿರುವುದಿಲ್ಲ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಂತರ ಈ ಬಗ್ಗೆ ವಿಚಾರ ಮಾಡಿದಾಗ ಕಾವೇರಿ ಅಪ್ಪರವರು ಯಾವುದೇ ರೀತಿ ಮೇಲೆ ಹೇಳಿದ ಸಾಲವನ್ನು ಪಡೆದಿರುವುದಿಲ್ಲ ಎನ್ನುವ ವಿಚಾರ ಗೊತ್ತಾಯಿತು ಎಂದರೆ ಗೊತ್ತಿಲ್ಲ. ದಿನಾಂಕ 23.03.2009 ರಂದು ಡಿವೈ ಉಪ್ಪಾರವರು ಹುಣಸೂರಿನ ಶಾಖೆಯಲ್ಲಿ ಖಾತೆ ನಂ 762541 ನ್ನು ಹೊಂದಿದ್ದು ಸದರಿ ಖಾತೆ ತೆಗೆಯಲು ಆರೋಪಿ ಜಗ್ಗಪ್ಪ ಸ,ನ ಕುಮಾರ ಕುಮಾರ ಗೌಡ ಎನ್ನುವವರನ್ನು ನನಗೆ ಪಡಿಚಯಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಡಿ ವೈ ಉಪ್ಪಾರರವರು ಅನೇಕ ಸಾಲ ಸೌಲಭ್ಯಗಳನ್ನು ಬ್ಯಾಂಕನಿಂದ ಪಡೆದಿರುತ್ತಾರೆ ಎಂದರೆ ಗೂತ್ತಿಲ್ಲ. ದಿನಾಂಕ 11.08.2010 ರಂದು ರೂ.25,00,000/-ಗಳನ್ನು ಆರೋಪಿಯು ಯೂವುದೇ ಅನುಮತಿ ಇಲ್ಲದೆ ಡೆಬಿಟ್ ಸ್ಲಿಪ ಹಾಗೂ ಆರ್ಟಿಜಿಎಸ್ ಮೂಲಕ ತಮ್ಮ ಹೆಂಡತಿ ನಡೆಸುತ್ತಿರುವ ಶ್ರಧ್ಧಾ ಎಂಟರಪ್ರೈಸಿಸ್ ಸಂಸ್ಥೆಯ ಖಾತೆಗೆ ವರ್ಗಾವಣೆ ಮಾಡಿಕೊಂಡು ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ಈ ರೀತಿ ಆರೋಪಿಯು ರಾಜಮ್ಮರವರಿಗೆ ಸಂಬಂಧಪಟ್ಟ ರೂ.57,250/- ವರದರಾಜುರವರ ಬಾಬ್ತು ರೂ.36,000/- ಹಾಗೂ ಉಪ್ಪಾರವರ ಬಾಬ್ತು ರೂ.25,00,000/- ಹೀಗೆ ಒಟ್ಟು ರೂ.25,93,280/-ಗಳನ್ನು ಬ್ಯಾಂಕಗೆ ನಷ್ಟ ಪಡಿಸಿ ತಮ್ಮ ಸ್ವಂತಕ್ಕೆ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ.108 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ ಎಲ್ ಕೆ ಅವರಿಂದ–**

5. ಮ್ಯಾನೇಜರ್ ಆರೋಪಿ ಅವರು ತನ್ನ ಹೆಂಡತಿ ಅಕೌಂಟ್ ಗೆ ರಾಜಮ್ಮ ಅವರ ಚೆಕ್ ಅನ್ನು 25,00,000/- ರೂ. ಆರ್ ಟಿ ಜಿ ಎಸ್ ಮೂಲಕ ಹಾಕಿಕೊಂಡಿರುತ್ತಾರೆ ಎಂಬ ಬಗ್ಗೆ ದಾಖಲಾತಿಗಳನ್ನು ನೋಡಿಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.